**ದಿನಾಂಕ 30/06.2021 ರಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಯಮ, 1ನೇ ಮಹಡಿ, ಸಭೆಯ ಸಭಾಂಗಣ, 18ನೇ ಅಡ್ಡರಸ್ತೆ, ವನವಿಕಾಸ, ಬೆಂಗಳೂರು ಇಲ್ಲಿ ಹಮ್ಮಿಕೊಂಡ 47ನೇ ಮಂಡಳ ಸಭೆಯ ನಡವಳಿಗಳು**

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1 | ಶ್ರೀ.ಅನಂತ ಹೆಗಡೆ ಅಶೀಸರ ಕರ್ನಾಟಕ ಜೀವವೈವಿಧ್ಯ ಮಂಡಳ,ಬೆಂಗಳೂರು. | ಮಾನ್ಯ ಅಧ್ಯಕ್ಷರು |
| 2 | ಡಾ.ಬಿ.ಪಿ.ಲಕ್ಷ್ಮಿಕಾಂತ, ಜಂಟಿ ನಿರ್ದೇಶಕರು, ಕೃಷಿ ಇಲಾಖೆ | ಪದನಿಮಿತ್ತ ಸದಸ್ಯರು |
| 3 | ಶ್ರೀ ಬ್ರಿಜೇಶ್ ಕುಮಾರ್, ಭಾ.ಅ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಜೀವಿಪರಿಸ್ಥಿತಿ ಮತ್ತು ಪರಿಸರ) ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ,ಬೆಂಗಳೂರು | ಪದನಿಮಿತ್ತ ಸದಸ್ಯರು |
| 4 | ಶ್ರೀ.ರಾಮಚಂದ್ರ ಭಾ.ಅ.ಸೇ. ಆಯುಕ್ತರು, ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಆಯುಷ್) ಇಲಾಖೆ ಬೆಂಗಳೂರು-09 | ಪದನಿಮಿತ್ತ ಸದಸ್ಯರು |
| 5 | ಡಾ.ಸಿ.ಜಿ.ಕುಶಾಲಪ್ಪ, ಡೀನ್ ಫಾರೆಸ್ಟರಿ, ಕಾಲೇಜ್ ಆಫ್ ಫಾರೆಸ್ಟರಿ, ಪೊನ್ನಂಪೇಟೆ,ಕೊಡಗು | ಅಧಿಕಾರೇತರ ಸದಸ್ಯರು |
| 6 | ಡಾ. ಪ್ರಕಾಶ್ ಮೇಸ್ತಾ, ಏಸು ಬಂದರು, ಕೆಳಗಿನಪಾಳ್ಯ, ಉತ್ತರಕನ್ನಡ | ಅಧಿಕಾರೇತರ ಸದಸ್ಯರು |
| 7 | ಶ್ರೀ ಕೆ.ವೆಂಕಟೇಶ್, ಕೋ-ಆರ್ಡಿನೇಟರ್, ಗ್ರಾಮೀಣ ಸಮುದಾಯ ವಿಜ್ಞಾನ ಕೇಂದ್ರ, ಶಿವಮೊಗ್ಗ | ಅಧಿಕಾರೇತರ ಸದಸ್ಯರು |
| 8 | ಶ್ರೀ ವೆಂಕಟೇಶ್, ಸಹಾಯಕ ಡ್ರಗ್ಸ್ ಕಂಟ್ರೋಲರ್. | ವಿಶೇಷ ಆಹ್ವಾನಿತರು |
| 9 | ಶ್ರೀ ಪುನೀತ್ ಪಾಠಕ್, ಭಾ.ಅ.ಸೇ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಸದಸ್ಯ ಕಾರ್ಯದರ್ಶಿ, ಕರ್ನಾಟಕ ಜೀವವೈವಿಧ್ಯ ಮಂಡಳ, ಬೆಂಗಳೂರು. | ಸಂಚಾಲಕರು |

**ಅನುಪಸ್ಥಿತಿಯಲ್ಲಿದ್ದ ಸದಸ್ಯರ ವಿವರ:**

| | | |
|---|---|---|
| 1 | ಶ್ರೀ.ಸಂದೀಪ್ ದಾವೆ, ಪ್ರಧಾನ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆ. | ಪದನಿಮಿತ್ತ ಸದಸ್ಯರು |
| 2 | ಶ್ರೀ.ಸಂಜಯ್ ಮೋಹನ್, ಭಾ.ಅ.ಸೇ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, ಬೆಂಗಳೂರು | ಪದನಿಮಿತ್ತ ಸದಸ್ಯರು |

| | | |
|---|---|---|
| ೩ | ಡಾ.ಹರಿಣಿ ನಾಗೇಂದ್ರ, ಪ್ರೊಫೆಸರ್, ಸಸ್ಟೇನಬಲ್ ಸ್ಟಡಿ ಸೆಂಟರ್, ಅಜೀಮ್ ಪ್ರೇಮಜಿ ಯುನಿವರ್ಸಿಟಿ, ಪಿಇಎಸ್ ಕ್ಯಾಂಪಸ್, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು. | ಅಧಿಕಾರೇತರ ಸದಸ್ಯರು |
| 4 | ಶ್ರೀಮತಿ. ಅನಿತಾ ಅರೇಕಲ್, ಭಾ.ಅ.ಸೇ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ), ಅರಣ್ಯ ಭವನ, ಬೆಂಗಳೂರು | ವಿಶೇಷ ಆಹ್ವಾನಿತರು |

ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಜೀವವೈವಿಧ್ಯ ಮಂಡಳಿ, ಇವರು 47ನೇ ಸಭೆಗೆ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು. ಮಾನ್ಯ ಅಧ್ಯಕ್ಷರು, ಜೀವವೈವಿಧ್ಯ ಮಂಡಳಿರವರು ಕೋವಿಡ್-19 ರ ಪ್ರಯುಕ್ತ ಸಭೆಯನ್ನು ಕರೆಯಲು ವಿಳಂಬವಾಯಿತು ಎಂದು ತಿಳಿಸಿ, ಸಭೆಯನ್ನು ಮುಂದುವರೆಸಿದರು.

| ಸಭೆಯ ಕಾರ್ಯಸೂಚಿಗಳು | ಸಭೆಯ ನಿರ್ಣಯಗಳು |
|---|---|
| **47/1- 46ನೇ ಮಂಡಳಿ ಸಭೆಯ ನಡವಳಿಗಳನ್ನು ಓದುವುದು ಮತ್ತು ದಾಖಲಿಸುವುದು:**<br>ದಿನಾಂಕ 28/01/2021ರಂದು ಜರುಗಿದ ಮಂಡಳಿಯ 46ನೇ ಸಭೆಯ ನಡವಳಿಗಳನ್ನು ಓದಿ ದಾಖಲಿಸಲಾಗಿದೆ. | 46ನೇ ಮಂಡಳಿ ಸಭೆಯ ಅಂತಿಮ ನಡವಳಿಯನ್ನು ಅಂಗೀಕರಿಸಲಾಯಿತು. |
| **47/2- 46ನೇ ಮಂಡಳಿ ಸಭೆಯ ನಡವಳಿಯ ಮೇಲೆ ಕೈಗೊಂಡ ಕ್ರಮಗಳು**<br>46ನೇ ಮಂಡಳಿ ಸಭೆಯ ನಡವಳಿಯ ಮೇರೆಗೆ ಕೈಗೊಂಡ ಕ್ರಮಗಳನ್ನು ಸಭೆಗೆ ಮಂಡಿಸಲಾಗಿದೆ. | 46ನೇ ಮಂಡಳಿ ಸಭೆಯ ನಡವಳಿಗಳನ್ವಯ ಕೈಗೊಂಡ ಕ್ರಮಗಳನ್ನು ಸಭೆಯು ಅಂಗೀಕರಿಸಿತು. |
| **47/3** - ಜನವರಿ 2021 ರಿಂದ ಜೂನ್ 2021ರವರೆಗೆ ಮಂಡಳಿಯ ಅಧ್ಯಕ್ಷರು ಮತ್ತು ಅಧಿಕಾರಿಗಳು ಹಮ್ಮಿಕೊಂಡ ಎಲ್ಲಾ ಕಾರ್ಯಚಟುವಟಿಕೆಗಳನ್ನು ಮಂಡಳಿಯ ಸಭೆಯಲ್ಲಿ ಮಂಡಿಸಿದೆ. | ಜನವರಿ-2021 ರಿಂದ ಜೂನ್-2021 ರವರೆಗೆ ಹಮ್ಮಿಕೊಂಡ ಎಲ್ಲಾ ಕಾರ್ಯಚಟುವಟಿಕೆಗಳಿಗೆ ಮಂಡಳಿಯ ಸಭೆಯು ಶ್ಲಾಘನೆಯನ್ನು ವ್ಯಕ್ತಿಪಡಿಸಿತು. |
| **47/4- ಜನತಾ ಜೀವವೈವಿಧ್ಯ ದಾಖಲಾತಿ ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಬಲವರ್ಧನೆ:**<br>ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆಯಲ್ಲಿ ಶೇಕಡ 100%ರಷ್ಟು ಸಾಧನೆ ಮಾಡಿರುವುದನ್ನು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು (ಅಭಿವೃದ್ಧಿ), ಪಂಚಾಯತ್ ರಾಜ್ ಆಯುಕ್ತಾಲಯರವರನ್ನು ನೋಡಲ್ | ಮಂಡಳಿಯ ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕಾದರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಕಾರ ಅಗತ್ಯವೆಂದು ತಿಳಿಸಿ, ಈಗಾಗಲೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು (ಅಭಿವೃದ್ಧಿ) ರವರನ್ನು ಜೀವವೈವಿಧ್ಯ ನಿರ್ವಹಣಾ ಸಮಿತಿಯ |

| | |
|---|---|
| ಅಧಿಕಾರಿಯಾಗಿ ನೇಮಿಸುವುದು ಹಾಗೂ ತಾಲ್ಲೂಕು ವಲಯ ಅರಣ್ಯಾಧಿಕಾರಿ, ಸಾಮಾಜಿಕ ವಿಭಾಗದವರು ತಾಲ್ಲೂಕು ಮಟ್ಟದ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಉಸ್ತುವಾರಿ ವಹಿಸಿಕೊಳ್ಳುವ ಬಗ್ಗೆ ಕೈಗೊಂಡ ನಿರ್ಣಯಗಳ ಕುರಿತು ನಡವಳಿಯನ್ನು ಮಾಹಿತಿಗಾಗಿ ಮಂಡಿಸಲಾಗಿದೆ. | ಕಾರ್ಯಚಟುವಟಿಕೆಗಳಿಗೆ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ ಎಂದು ಮಾಹಿತಿ ನೀಡಿದರು. ಪ್ರಸ್ತುತ ರಾಜ್ಯದ ಎಲ್ಲಾ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜನತಾ ಜೀವವೈವಿಧ್ಯ ದಾಖಲಾತಿ ಪೂರ್ಣಗೊಂಡಿದ್ದು ದಾಖಲಾತಿಗಳ ಗುಣಮಟ್ಟದ ಉನ್ನತೀಕರಣದ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿದರು. ಮಾಹಿತಿಯನ್ನು ಮಂಡಳಿಯು ಗಮನಿಸಿತು. |
| **47/5– ಅಳಿವಿನಂಚಿನಲ್ಲಿರುವ ಪ್ರಭೇಧಗಳು, ಚಂದನ ಇತ್ಯಾದಿ ಕಂಡುಬರುವಂತಹ ಸ್ಥಳಗಳ ಗುರುತಿಸುವಿಕೆ ಹಾಗೂ ಅವುಗಳ ಸಂರಕ್ಷಣೆಗೆ ಎಬಿಎಸ್ ನಿಧಿಯಿಂದ ಅನುದಾನವನ್ನು ನೀಡುವುದು.** ಮಂಡಳಿಯು ನಡೆಸಿದ 46ನೇ ಸಭೆಯಲ್ಲಿ ಶ್ರೀಗಂಧ ಮತ್ತು ರಕ್ತ ಚಂದನ ಮರಗಳನ್ನು ಪಡೆದುಕೊಳ್ಳುವ ಯಶಸ್ವಿ ಬಿಡ್ಡುದಾರರಿಂದ ಪಡೆದ ಎಬಿಎಸ್ ಮೊತ್ತವನ್ನು ಸಂರಕ್ಷಣಾ ಚಟುವಟಿಕೆಗಳಿಗಾಗಿ ಮತ್ತು ಒಟ್ಟಾರೆ ಜೀವವೈವಿಧ್ಯ ಸಂರಕ್ಷಣೆಗಾಗಿ ವಿಶೇಷವಾಗಿ ಔಷಧೀಯ ಸಸ್ಯಗಳು, ಶ್ರೀಗಂಧ ಮತ್ತು ರಕ್ತ ಚಂದನ ಮರಗಳನ್ನು ಹೊಂದಿರುವ ಜಿಲ್ಲೆಗಳ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ನೀಡಬೇಕೆಂದು ಹಾಗೂ ಕರ್ನಾಟಕ ಅರಣ್ಯ ಇಲಾಖೆ ಮತ್ತು ಆಯ್ದ ಪ್ರದೇಶಗಳ ಬಿಎಂಸಿಗಳ ಸಹಯೋಗದೊಂದಿಗೆ ಕೇಂದ್ರೀಕೃತ ಯೋಜನೆಗಳ ಮೂಲಕ ಹಣವನ್ನು ಸಂರಕ್ಷಣಾ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು ಎಂದು ನಿರ್ಣಯಿಸಲಾಯಿತು. ಆದ್ದರಿಂದ, ಸಿದ್ದಾಪುರದಲ್ಲಿರುವ ಕತ್ತಲೆಖಾನ್ ಮಿರಿಸ್ಟಿಕಾ ಜೌಗು ಪ್ರದೇಶ, ಸಾಗರ ತಾಲ್ಲೂಕಿನ ಶಿವಮೊಗ್ಗ ಜಿಲ್ಲೆಯ ಸೀತಾ ಅಶೋಕವನ ಮಂಡ್ಯ, ಬೀದರ, ಚಾಮರಾಜನಗರ ಜಿಲ್ಲೆಗಳಲ್ಲಿನ ಶ್ರೀಗಂಧ ಮತ್ತು ರಕ್ತಚಂದನ ಮತ್ತು ಆರ್‌ಇಟಿ ಪ್ರಭೇದಗಳು ಮತ್ತು ಔಷಧೀಯ ಸಸ್ಯಗಳ ರಕ್ಷಣೆ, ಸಂರಕ್ಷಣೆ ಮತ್ತು ಅಭಿವೃದ್ಧಿ ಮಾಡಲು ಆಯಾ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ (ಪ್ರಾದೇಶಿಕ | ಮಂಡಳಿಯ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಬೀದರ್ ಹಾಗೂ ಮಂಡ್ಯ ಜಿಲ್ಲೆಯಲ್ಲಿ ನೈಸರ್ಗಿಕವಾಗಿ ಬೆಳೆದ ರಕ್ತಚಂದನದ ಮರಗಳು ಬೆಳೆಯುತ್ತಿದ್ದು, ಅವುಗಳ ಬಲವರ್ಧನೆಗೆ ಹಾಗೂ ಸಂರಕ್ಷಣೆಗೆ ಸೂಕ್ತವಾದ ಕಾರ್ಯಸೂಚಿಯೊಂದಿಗೆ ಸ್ಥಳೀಯ ಜೀವವೈವಿಧ್ಯ ನಿರ್ವಹಣಾ ಸಮಿತಿ ಮತ್ತು ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಸಮಾಲೋಚಿಸಿ, ಎಬಿಎಸ್ ನಿಧಿಯ ಅನುದಾನವನ್ನು ಬಳಕೆ ಮಾಡಬಹುದಾಗಿದೆ ಎಂದು ತಿಳಿಸಿದರು. ಚಂದನ ಮತ್ತು ಆರ್‌ಇಟಿ ಪ್ರಭೇಧಗಳು ಮತ್ತು ಔಷಧಿ ಸಸ್ಯಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಕಾರ್ಯಸೂಚಿಯಲ್ಲಿ ಮಂಡಿಸಿದ ವಿಷಯವನ್ನು ಮಂಡಳಿಯು ಅನುಮೋದಿಸಿತು. |

| | |
|---|---|
| ವಿಭಾಗ) ಮೂಲಕ ಸಂಬಂಧಿಸಿದ 5 ತಾಲ್ಲುಕು ಪಂಚಾಯತಿ ಬಿಎಂಸಿಗಳ ಸಹಕಾರ ಪಡೆದು ಪ್ರತಿ ಸ್ಥಳಕ್ಕೆ ತಲಾ ರೂ. 10.00 ಲಕ್ಷಗಳು ಒಟ್ಟು ರೂ 50.00ಲಕ್ಷಗಳನ್ನು ಎಬಿಎಸ್ ನಿಧಿಯಿಂದ ಮಂಜೂರು ಮಾಡಬಹುದು. ಆಯಾ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಕ್ರಿಯಾ ಯೋಜನೆಯನ್ನು ಪಡೆದು ಮುಂದಿನ ಕ್ರಮವನ್ನು ಕೈಗೊಳ್ಳಲು ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | |
| **47/6–ಎಬಿಎಸ್ ಪರಿಣಿತ ತಜ್ಞರ ಸಮಿತಿ ಸಭೆಯ ನಿರ್ಣಯಗಳು**<br>ಎಬಿಎಸ್ ಪರಿಣಿತ ತಜ್ಞರ ಸಮಿತಿಯ ಸಭೆಗಳನ್ನು ದಿನಾಂಕ 30/03/2021 ಹಾಗೂ 11/05/2021ರಂದು ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಗಳಲ್ಲಿ ಕೈಗೊಂಡ ಶಿಫಾರಸ್ಸಿನ ನಿರ್ಣಯಗಳನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | ಎಬಿಎಸ್ ತಜ್ಞರ ಸಮಿತಿಯ ಸಭೆಯ ಕುರಿತು ಉಲ್ಲೇಖಿಸಿದ ವಿಷಯವನ್ನು ಮಂಡಳಿಯು ಅನುಮೋದಿಸಿತು. |
| **47/7–ಎಬಿಎಸ್ ಶಾಖೆಗೆ ತಾಂತ್ರಿಕ ಸಹಾಯಕರ ನೇಮಕಾತಿ**<br>ಎಬಿಎಸ್ ಶಾಖೆಗೆ ತಾಂತ್ರಿಕ ಸಹಾಯಕರ ನೇಮಕಾತಿಯ ಕುರಿತು ದಿನಾಂಕ 22/10/2020ರಂದು ನಡೆದ 45ನೇ ಮಂಡಳಿ ಸಭೆಯಲ್ಲಿ ಚರ್ಚಿಸಲಾಗಿತ್ತು. ನೇಮಕಾತಿಯ ವಿವರವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಈವರೆಗೆ ಅನುಮೋದನೆ ದೊರೆಯದೆ ವಿಳಂಬವಾಗಿರುತ್ತದೆ. ನೇಮಕಾತಿಯು ಅತ್ಯಂತ ತುರ್ತು ಇರುವುದರಿಂದ ನಿಯಮಾನುಸಾರ ನೇಮಕ ಮಾಡಿಕೊಳ್ಳಲು ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ. | ಈ ವಿಷಯವಾಗಿ ಪೂರ್ಣವಾಗಿ ಚರ್ಚಿಸಿ, ಎಬಿಎಸ್ ಮತ್ತು ಅಇಖು ಮುಖಾಂತರ ಸಂಗ್ರಹವಾಗುವ ಅನುದಾನದ ಮಾಹಿತಿಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಅಗತ್ಯ ಕ್ರಮಗಳ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲನೆ ಮಾಡಲಾಗುವುದು ಎಂದು ಪ್ರಧಾನ ಕಾರ್ಯದರ್ಶಿಗಳು, ಪರಿಸರ ಮತ್ತು ಜೀವಿಪರಿಸ್ಥಿತಿರವರು ತಿಳಿಸಿದರು. ಇದನ್ನು ಮಂಡಳಿಯು ಅನುಮೋದಿಸಿತು. |
| **47/8–ಕರಾವಳಿಪ್ರದೇಶಗಳ ಜೀವವೈವಿಧ್ಯ ಸಂರಕ್ಷಣೆ:**<br>ಕರಾವಳಿ ಪ್ರದೇಶಗಳಲ್ಲಿನ ಜೀವವೈವಿಧ್ಯ ಸಂರಕ್ಷಣೆ ಕುರಿತಂತೆ ಪರಿಣಿತ ತಜ್ಞರು ಹಾಗೂ ಸ್ಥಳೀಯ ಇಲಾಖೆಗಳ ಅಧಿಕಾರಿಗಳೊಂದಿಗೆ ಸಮಾಲೋಚನಾ ಸಭೆಯನ್ನು ನಡೆಸಿ ಈ ಬಗ್ಗೆ | ಪ್ರಧಾನ ಕಾರ್ಯದರ್ಶಿಗಳು, ಪರಿಸರ ಮತ್ತು ಜೀವಿಪರಿಸ್ಥಿತಿ ರವರು ಈಗಾಗಲೇ ಕರಾವಳಿ ವಲಯದ ಅಧಿಸೂಚನೆಯು ಚಾಲ್ತಿಯಲ್ಲಿದ್ದು, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಮಂಡಳಿಯ ಸಲಹೆಗಳನ್ನು ನೀಡಬಹುದೆಂದು ತಿಳಿಸಿದರು. 2021ನೇ |

| | |
|---|---|
| ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಸಲ್ಲಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | ಸಾಲಿನ ಮುಂಗಾರು ಚಂಡಮಾರುತ ಸಂಧರ್ಭಗಳಲ್ಲಿ ಉತ್ತರ ಕನ್ನಡ ಭಾಗದ ಸಮುದ್ರ ತೀರದಲ್ಲಿ ಸ್ವಾಭಾವಿಕವಾಗಿ ಹಾಗೂ ಅರಣ್ಯ ಇಲಾಖೆಯಿಂದ ಬೆಳೆಸಲ್ಪಟ್ಟ ಹಸಿರು ಕವಚದಿಂದಾಗಿ ಭೂಸವಕಳಿಯು ಕಡಿಮೆಯಾಗಿರುವುದನ್ನು ಅಧ್ಯಕ್ಷರು ಹಾಗೂ ಮಂಡಳಿಯ ಸದಸ್ಯರಾದ ಶ್ರೀ.ಪ್ರಕಾಶ್ ಮೇಸ್ತ ರವರು ಉಲ್ಲೇಖಿಸಿ ಹಸಿರು ಕವಚದ ಮಾದರಿಯನ್ನು ಅಳವಡಿಸಲು ತಜ್ಞರೊಂದಿಗೆ ಚರ್ಚಿಸಿ, ನೀಲನಕ್ಷೆಯನ್ನು ಸಿದ್ದಪಡಿಸಿ, ಸರ್ಕಾರಕ್ಕೆ ಸಲಹೆ ನೀಡಬಹುದೆಂದು ಸಭೆಗೆ ತಿಳಿಸಿದರು. ಇದನ್ನು ಸಭೆ ಅಂಗೀಕರಿಸಿತು. |
| **47/9 –ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ 2021ರ ಅಭಿಯಾನದ ಕಾರ್ಯಕ್ರಮಗಳು**<br>ಈ ಸಾಲಿನ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ 2021ರ ಅಭಿಯಾನಕ್ಕೆ ರೂ.21,30,000/-ಗಳ ಅಂದಾಜು ವೆಚ್ಚದ ಪಟ್ಟಿಯನ್ನು ತಯಾರಿಸಿದ್ದು, ಸಭೆಯ ಮಾಹಿತಿಗಾಗಿ ಮಂಡಿಸಲಾಗಿದೆ. | ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯ ಕಾರ್ಯಯೋಜನೆಗಳನ್ನು ಸಭೆಯು ಅಂಗೀಕರಿಸಿತು. |
| **47/10–ಭೂ ಕುಸಿತ ವರದಿ, ಅಳಿವಿನಂಚಿನ ಪ್ರಬೇದಗಳ ವರದಿಗಳ ಮಂಡನೆ:**<br>ಅ) ಜೀವವೈವಿಧ್ಯ ಮಂಡಳಿಯ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸರ್ಕಾರ ರಚಿಸಿದ್ದ ಭೂಕುಸಿತ ಅಧ್ಯಯನ ತಜ್ಞ ಸಮಿತಿಯು ಇದೀಗ ತನ್ನ ವರದಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದೆ. ಅದರ ಪ್ರತಿಯನ್ನು ಮಾನ್ಯ ಸದಸ್ಯರ ಗಮನಕ್ಕಾಗಿ ಮಂಡಿಸಲಾಗಿದೆ. | ಭೂಕುಸಿತ ವರದಿ ಹಾಗೂ ಅಳಿವಿನಂಚಿನಲ್ಲಿರುವ ಸಸ್ಯ ಪ್ರಾಣಿ ಪ್ರಭೇಧಗಳ ವರದಿಯನ್ನು ಕೇಂದ್ರ ಪರಿಸರ ಇಲಾಖೆ, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಹಾಗೂ ರಾಜ್ಯದ ಅರಣ್ಯ ಅಧಿಕಾರಿಗಳಿಗೆ ಮಾಹಿತಿಯನ್ನು ಕಳುಹಿಸಿಕೊಡಲು ಸಭೆಯು ಸೂಚಿಸಿತು. |
| **47/10–(ಆ)** – ಮಂಡಳಿಯು ರಚಿಸಿದ್ದ ತಜ್ಞ ಸಮಿತಿಗಳು ನೀಡಿದ ರಾಜ್ಯದಲ್ಲಿನ ವಿನಾಶದ ಅಂಚಿನ ಸಸ್ಯ ಹಾಗೂ ಪ್ರಾಣಿ ಪ್ರಬೇಧಗಳ ಯಾದಿಯ ವರದಿಗಳನ್ನು, ಮಂಡಳಿಯು ಹಿಂದಿನ ಸಭೆಯಲ್ಲಿ ಅಂಗೀಕರಿಸಿದೆ. ಈ ಕುರಿತಂತೆ, ವಿನಾಶದಂಚಿನ ಸಸ್ಯಗಳ ನಿಕರ ಮಾಹಿತಿಯನ್ನು ಕಲೆಹಾಕಲು Conservation assessment and Managment Plan (CAMP) ಶಿಬಿರಗಳನ್ನು ಆಯೋಜಿಸುವಂತೆ ಮಾನ್ಯ ಸದಸ್ಯರಿಂದ | (CAMP) ಶಿಬಿರಗಳನ್ನು ಆಯೋಜಿಸಲು ಸಭೆಯು ಅನುಮೋದಿಸಿತು. |

| | |
|---|---|
| ಸಲಹೆಗಳನ್ನು ಪಡೆಯಲಾಗಿರುತ್ತದೆ. ಈ ನಿಟ್ಟಿನಲ್ಲಿ ಕರಾವಳಿ, ಮಲೆನಾಡು ಹಾಗೂ ಬಯಲುಸೀಮೆ ಈ ಮೂರು ಪ್ರದೇಶಗಳಲ್ಲಿ ತಲಾ ಒಂದರಂತೆ ಒಟ್ಟು ಮೂರು ಅಧ್ಯಯನಗಳ ಶಿಬಿರಗಳನ್ನು ಆಯೋಜಿಸಲು ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಗಿದೆ. | |
| **47/11– ದಾವಣಗೆರೆ ಜಿಲ್ಲೆಯ ಕುಂದುವಾಡ ಕೆರೆಯಸುಸ್ಥಿರ ಅಭಿವೃದ್ಧಿ**<br>ದಾವಣಗೆರೆಯ ಕುಂದುವಾಡ ಕೆರೆಯ ಅಭಿವೃದ್ಧಿ ಕಾಮಗಾರಿಗಳಲ್ಲಿ ಅಲ್ಲಿನ ಜಲಚರಗಳಿಗೆ ಹಾನಿಯಾಗಿರುವ ಕಾಮಗಾರಿಗಳ ಕುರಿತು ಹಲವು ದೂರುಗಳು ಬಂದಿದ್ದವು. ಈ ನಿಟ್ಟಿನಲ್ಲಿ ಮಂಡಳಿಯ ಮಾನ್ಯ ಅಧ್ಯಕ್ಷರು ಸ್ಥಳಕ್ಕೆ ಭೇಟಿ ನೀಡಿ ಸಮಾಲೋಚನೆಯನ್ನು ನಡೆಸಿ, ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದರು.ಅದರಂತೆ, ರಾಜ್ಯದಲ್ಲೆಡೆ ಕೆರೆಗಳ ಹೂಳೆತ್ತುವುದು/ಅಭಿವೃದ್ಧಿಕಾರ್ಯ ಕೈಗೊಳ್ಳುವಾಗ, ಅಲ್ಲಿನ ಜೀವವೈವಿಧ್ಯ ಹಾಗೂ ಪರಿಸರ ರಕ್ಷಿಸುವ ದೃಷ್ಟಿಯಿಂದ ಪಾಲಿಸಬೇಕಾದ ಕನಿಷ್ಠ ನಿಯಮಗಳಿರುವ ಸೂತ್ರಗಳನ್ನು ಅಧಿಕೃತವಾಗಿ ಪ್ರಕಟಿಸುವಂತೆ “ರಾಜ್ಯ ಕೆರೆ ಅಭಿವೃದ್ಧಿ ಪ್ರಾಧಿಕಾರ”ವನ್ನು ಕೋರಲು ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಲಾಗಿದೆ. | ರಾಜ್ಯ ಕೆರೆ ಅಭಿವೃದ್ಧಿ ಪ್ರಾಧಿಕಾರವು ಈಗ ಟ್ಯಾಂಕ್(ಕೊಳ) ಅಭಿವೃದ್ಧಿ ಪ್ರಾಧಿಕಾರವಾಗಿದ್ದು, ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರವಾಗಿದೆ ಎಂದು ಪ್ರಧಾನ ಕಾರ್ಯದರ್ಶಿಗಳು, ಪರಿಸರ ಮತ್ತು ಜೀವಿಪರಿಸ್ಥಿತಿರವರು ತಿಳಿಸಿದರು. ಕೆರೆ ಮತ್ತು ಜೌಗು ಪ್ರದೇಶಗಳಲ್ಲಿರುವ ಜೀವವೈವಿಧ್ಯದ ಸಂರಕ್ಷಣೆಗೆ ಆದ್ಯತೆ ನೀಡಲು ತಾಂತ್ರಿಕ ಪರಿಣಿತ ಸಮಿತಿಯನ್ನು ರಚಿಸಿ, ಅದರ ವರದಿ ಹಾಗೂ ಸಲಹೆಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಮಂಡಳಿಯು ಸೂಚಿಸಿತು. ಈ ಬಗ್ಗೆ ಮುಂದುವರೆಯಲು ಅಧ್ಯಕ್ಷರಿಗೆ ಅಧಿಕಾರ ನೀಡಲಾಯಿತು. |
| **47/12– ಅಪರೂಪದ ಮಾವು ಹಾಗೂ ಹಲಸಿನ ತಳಿಗಳ ಸಂರಕ್ಷಣೆ:**<br>ಕಡಿಮೆ ಸಂಖ್ಯೆಯಲ್ಲಿರುವ ಅಪರೂಪದ ಸ್ಥಳೀಯ ಮಾವು / ಹಲಸಿನ ಮರಗಳು ನಶಿಸಿ ಹೋಗದಂತೆ ಅವುಗಳನ್ನು ತಡೆಯಲು, ಸಂರಕ್ಷಿಸಲು ಹಾಗೂ ಸಸ್ಯಗಳ ಪ್ರಸರಣ ಕಾರ್ಯವನ್ನು ನಿರ್ವಹಿಸಲು ಸಂಬಂಧಪಟ್ಟ ತೋಟಗಾರಿಕೆ ಇಲಾಖೆಗೆ ಮಂಡಳಿಯಿಂದ ನಿರ್ದೇಶನ ನೀಡಲು ವಿಷಯವನ್ನು ಸಭೆಯಲ್ಲಿ ಮಂಡಿಸಲಾಗಿದೆ. ರಾಜ್ಯದ ವಿವಿಧ ಪ್ರದೇಶಗಳಲ್ಲಿರುವ ಎಲ್ಲಾ ಪಾರಂಪರಿಕ ಮಾವು ಹಾಗೂ ಹಲಸಿನ ತಳಿಗಳನ್ನು, ಆಯ್ದ ನರ್ಸರಿಗಳಲ್ಲಿ ಬೆಳೆಸಿ, ರೈತರಿಗೆ ಬೆಳೆಸಲು | ಅಪರೂಪದ ಮಾವು ಹಾಗೂ ಹಲಸಿನ ತಳಿಗಳ ಸಂರಕ್ಷಣೆಗೆ ಸೂಕ್ತವಾಗಿರುವ ಜೀವವೈವಿಧ್ಯ ಕಾಯ್ದೆಗಳನ್ನು ಉಲ್ಲೇಖಿಸಿ, ತೋಟಗಾರಿಕೆ ಇಲಾಖೆಗೆ ನಿರ್ದೇಶನ ನೀಡಲು ಮಂಡಳಿಯು ಅನುಮೋದಿಸಿತು. |

| | |
|---|---|
| ಪ್ರೋತ್ಸಾಹ ನೀಡುವಂತೆ ಕ್ರಮ ಕೈಗೊಳ್ಳಲು ತೋಟಗಾರಿಕಾ ಇಲಾಖೆಗೆ ನಿರ್ದೇಶನ ನೀಡುವಂತೆ ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಲಾಗಿದೆ. | |
| **47/13– ಪಾರಂಪರಿಕ ಮರಗಳ ಸಂರಕ್ಷಣೆ:** ಪರಿಸರ/ಸಾಂಸ್ಕೃತಿಕ/ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿರುವ ಪಾರಂಪರಿಕ ಮರಗಳನ್ನು ಸಂರಕ್ಷಿಸಲು ಹಾಗೂ ಅವುಗಳನ್ನು ಕರ್ನಾಟಕದ ಪಾರಂಪರಿಕ ಮರಗಳೆಂದು ಘೋಷಿಸಬೇಕೆಂದು ಆನೇಕ ಸ್ಥಳೀಯರ ಕೋರಿಕೆಯಾಗಿರುತ್ತದೆ. ಈ ಕುರಿತು ಮಂಡಳಿಯು 2009ರಲ್ಲೆ ಕ್ರಮವನ್ನು ಕೈಗೊಂಡಿರುತ್ತದೆ.<br><br>ಕರ್ನಾಟಕದ 10 ಪಾರಂಪರಿಕ ಮರಗಳನ್ನು ಈಗಾಗಲೇ ಗುರುತಿಸಿ 2010ರಲ್ಲಿ ಮಂಡಳಿಯು ಆಯ್ಕೆಗೊಳಿಸಿ ಘೋಷಿಸುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ವಿಷಯವನ್ನು ಮಂಡಳಿಯ ನಿರ್ದೇಶನ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. | ಜೈವಿಕವೈವಿಧ್ಯ ಕಾನೂನಿನ್ವಯ ಪಾರಂಪರಿಕ ಮರಗಳ ಸಂರಕ್ಷಣೆಗೆ ಮುಂದಾಗಬೇಕೆಂದು ಸಭೆಯು ನಿರ್ಣಯ ಕೈಗೊಂಡಿತು. |
| **47/14– ಪಾರಂಪರಿಕ ತಾಣಗಳ ಸಂರಕ್ಷಣೆ:** ರಾಜ್ಯದೆಲ್ಲೆಡೆ ಹಾಗೂ ವಿಶೇಷವಾಗಿ ಮಲೆನಾಡಿನಲ್ಲಿ, ಅರಣ್ಯಭೂಮಿಯ ಹೊರಗಡೆ ಇರುವ ಸರ್ಕಾರಿ ಪ್ರದೇಶದಲ್ಲಿನ ದೇವರಕಾಡು, ಗೋಮಾಳ, ನದಿತಪ್ಪಲುಗಳಂಥ ಅಮೂಲ್ಯವಾದ ಸಾಮೂಹಿಕ ಭೂಮಿಗಳು ಅತಿಕ್ರಮಣ ಹಾಗೂ ಅವೈಜ್ಞಾನಿಕ ಬಳಕೆಯಿಂದಾಗಿ ನಾಶವಾಗುತ್ತಿವೆ. ಈ ಎಲ್ಲಾ ಬಗೆಯ ನೈಸರ್ಗಿಕ ಪ್ರದೇಶಗಳನ್ನು ರಕ್ಷಿಸುವ ಸೂಕ್ತ ನಿಯಮಗಳು ಹಾಗೂ ಯೋಜನೆಗಳನ್ನು ಜಂಟಿಯಾಗಿ ರೂಪಿಸುವಂತೆ, ಕಂದಾಯ ಹಾಗೂ ಅರಣ್ಯ ಇಲಾಖೆಗಳಿಗೆ ಕೋರಲು ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯ ಸಚಿವರು ಹಾಗೂ ಪ್ರಧಾನ ಕಾರ್ಯದರ್ಶಿಗಳೊಡನೆ ಸಮಾಲೋಚನೆ ಸಭೆ ನಡೆಸಿ, ಅವರ ಸಹಯೋಗದೊಂದಿಗೆ ಮುಂದಿನ ಕ್ರಮವನ್ನು ಕೈಗೊಳ್ಳಲು ಸಭೆಯು ಅನುಮೋದಿಸಿತು. |

| | |
|---|---|
| **47/15– ಜಿಲ್ಲಾಮಟ್ಟದಲ್ಲಿ ಜೀವವೈವಿಧ್ಯ ಪ್ರಶಸ್ತಿ ಪ್ರಧಾನ:**<br><br>ರಾಜ್ಯ ಮಟ್ಟದಲ್ಲಿ ಕೋವಿಡ್-19ರ ಕಾರಣದಿಂದಾಗಿ ಜೀವವೈವಿಧ್ಯ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತಿಲ್ಲಾ. 2020-21ನೇ ಸಾಲಿನ ಜೀವವೈವಿಧ್ಯ ಪ್ರಶಸ್ತಿಯನ್ನು ಎಲ್ಲಾ ಜಿಲ್ಲೆಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಅಂತರಾಷ್ಟ್ರೀಯ ಜೀವವೈವಿಧ್ಯ ಅಭಿಯಾನದಡಿಯಲ್ಲಿಪ್ರಧಾನ ಮಾಡಲಾಗುವುದು. ಈ ವಿಷಯವನ್ನು ಸಭೆಯ ಮಾಹಿತಿಗಾಗಿ ಮಂಡಿಸಲಾಗಿದೆ. | ಜಿಲ್ಲಾ ಮಟ್ಟದ ಜೀವವೈವಿಧ್ಯ ಪ್ರಶಸ್ತಿ ಪ್ರಧಾನ ಮಾಡಲು ಮಂಡಳಿಯು ಕೈಗೊಂಡ ನಿರ್ಣಯವನ್ನು ಸಭೆಯು ಅನುಮೋದಿಸಿತು. |
| **47/16– ಜೂನ್ 2021ರ ಕರ್ನಾಟಕ ರಾಜ್ಯಪತ್ರದಪ್ರಕಟಣೆ:**<br><br>ಜೂನ್ 2021ರಂದು ಪ್ರಕಟಗೊಂಡ ಕರ್ನಾಟಕ ರಾಜ್ಯ ಪತ್ರದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜೀವವೈವಿಧ್ಯ ನಿರ್ವಹಣಾ ಸಮಿತಿ) ನಿಯಮಗಳು 2021ರ ಅಧಿನಿಯಮವನ್ನು ಪ್ರಕಟಿಸಿದೆ. ಈ ಅಧಿಸೂಚನೆ ಪತ್ರದ 4ನೇ ಪುಟದಲ್ಲಿ ಜೀವವೈವಿಧ್ಯ ಮಂಡಳಿ ಆರಂಭಿಕ ಅನುದಾನವನ್ನು ಬಿಡುಗಡೆ ಮಾಡಲು ಸೂಚಿಸಿದೆ. ಈಗಾಗಲೇ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ, ತರಬೇತಿ ಕಾರ್ಯಕ್ರಮಗಳು ಮುಗಿದಿವೆ. ಅದರಂತೆ, ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ ಬಹುತೇಕವಾಗಿ ಮುಗಿದಿವೆ. ಸದರಿ ಚಟುವಟಿಕಾ ಕಾರ್ಯದಲ್ಲಿ ಮಂಡಳಿಯು ಸಲಹೆಯನ್ನು ನೀಡುವುದಾಗಿರುತ್ತದೆ.<br>ಆದಕಾರಣ ಆರಂಭಿಕ ಅನುದಾನವನ್ನು ಜೀವವೈವಿಧ್ಯ ಮಂಡಳಿಯು ನೀಡುವ ಅವಶ್ಯಕತೆ ಇರುವುದಿಲ್ಲ. ಈ ಅನುದಾನವನ್ನು ಗ್ರಾಮೀಣಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ ಇಲಾಖೆಯವರೇ ಭರಿಸುವಂತೆ ಕ್ರಮಕೈಗೊಳ್ಳಲು ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಲಾಗಿದೆ. | ಜೂನ್-2021 ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜೀವವೈವಿಧ್ಯ ನಿರ್ವಹಣಾ ಸಮಿತಿ) ನಿಯಮಗಳು 2021 ಮತ್ತು ಜೀವವೈವಿಧ್ಯ ಕಾಯ್ದೆ ಮತ್ತು ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು 2005 ರ ಮಧ್ಯ ಸಂಘರ್ಷವಿದೆಯೇ ಎಂದು ಪರಿಶೀಲಿಸಲು ತಾಂತ್ರಿಕ ಪರಿಣಿತ ಸಮಿತಿಯನ್ನು ರಚಿಸಿ ಶೀರ್ಘವಾಗಿ ಅನಿಸಿಕೆಗಳನ್ನು ಗ್ರಾಮೀಣಾಭಿವೃಧ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕಳುಹಿಸಬೇಕೆಂದು ಆಯುಕ್ತರು, ಆಯುಷ್ ಇಲಾಖೆರವರು ಅಭಿಪ್ರಾಯ ವ್ಯಕ್ತಪಡಿಸಿದರು. ಇದನ್ನು ಮಂಡಳಿಯು ಅನುಮೋದಿಸಿ, ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರಿಗೆ ಈ ಬಗ್ಗೆ ಮುಂದಿನ ಕ್ರಮಕೈಗೊಳ್ಳಲು ಅಧಿಕಾರ ನೀಡಲಾಯಿತು. |

| | |
|---|---|
| **47/17–ಪಂಚಾಯತ್‌ರಾಜ್ ಇಲಾಖೆಯ ನಿರ್ದೇಶಕರನ್ನು (ಅಭಿವೃದ್ಧಿ) ಮಂಡಳಿಯ ಸಭೆಗೆ ವಿಶೇಷ ಆಹ್ವಾನಿತರನ್ನಾಗಿ ನೇಮಕಗೊಳಿಸುವ ಕುರಿತು**.<br>ಜೈವಿಕವೈವಿಧ್ಯ ಅಧಿನಿಯಮ 2002 ಹಾಗೂ ಮಂಡಳಿಯ ಕಾರ್ಯ ಚಟುವಟಿಕೆಗಳನ್ನು ಪಂಚಾಯತ್ ರಾಜ್ ಇಲಾಖೆಯವರ ಸಂಪೂರ್ಣ ಸಹಕಾರದೊಂದಿಗೆ ಮುಂದುವರೆಸಬೇಕಾಗಿರುತ್ತದೆ.<br>ಈ ಹಿನ್ನಲೆಯಲ್ಲಿ ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರನ್ನು (ಅಭಿವೃದ್ಧಿ) ವಿಶೇಷ ಆಹ್ವಾನಿತರನ್ನಾಗಿ ನೇಮಕಗೊಳಿಸಿ ಮಂಡಳಿಯ ಸಭೆಗಳಿಗೆ ಆಹ್ವಾನಿಸಲು ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಲಾಗಿದೆ. | ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು (ಅಭಿವೃದ್ಧಿ)ರವರನ್ನು ಮಂಡಳಿಯ ಸಭೆಗೆ ವಿಶೇಷ ಆಹ್ವಾನಿತರನ್ನಾಗಿ ನೇಮಕಗೊಳಿಸಲು ಸಭೆಯು ಅನುಮೋದಿಸಿತು. |
| **47/18– ಶ್ರೀ. ಕೆ.ಆರ್. ಪ್ರಸನ್ನ, ತಾಂತ್ರಿಕ ಕಾರ್ಯನಿರ್ವಾಹಕರು (ಪಿಬಿಆರ್)ಇವರ ವೇತನ ಹೆಚ್ಚಳ ಕುರಿತು**.<br>ಶ್ರೀ.ಕೆ.ಆರ್.ಪ್ರಸನ್ನ, ತಾಂತ್ರಿಕ ಕಾರ್ಯನಿರ್ವಾಹಕರು (ಪಿಬಿಆರ್) ಮಂಡಳಿಯಲ್ಲಿ ಸುಮಾರು ಐದು ವರ್ಷಗಳಿಂದ ಜನತಾ ಜೀವವೈವಿಧ್ಯ ದಾಖಲಾತಿ ಶಾಖೆಯಲ್ಲಿ ಬಹಳ ಶ್ರಮವಹಿಸಿ ಹಾಗೂ ನಿಷ್ಠಾವಂತರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರು ಎಲ್ಲಾ ಜಿಲ್ಲೆಗಳ ಕ್ಷೇತ್ರ ಪ್ರವಾಸವನ್ನು ಕೈಗೊಂಡು ಜೀವವೈವಿಧ್ಯ ಸಂರಕ್ಷಣೆ ಕುರಿತು ತರಬೇತಿ ನೀಡುವುದರ ಮುಖಾಂತರ ಅರಿವನ್ನುಂಟು ಮಾಡಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಕೋವಿಡ್–19ರ ಖಾಯಿಲೆಯ ಸಂದರ್ಭದಲ್ಲೂ ಸಹ ಕಛೇರಿಯ ಕೆಲಸಗಳಲ್ಲಿ ತೊಡಗಿರುತ್ತಾರೆ. ಹಾಗೆಯೇ ಪಿಬಿಆರ್ ಸಮಾಲೋಚಕರ ಹುದ್ದೆಯ ಕಾರ್ಯವನ್ನೂ ಸಹ ಹೆಚ್ಚುವರಿಯಾಗಿ ನಿರ್ವಹಿಸುತ್ತಿದ್ದಾರೆ. ಪ್ರಸ್ತುತದಲ್ಲಿ ಇವರು ರೂ 31,500/–ಗಳ ವೇತನವನ್ನು ಪಡೆಯುತ್ತಿದ್ದು ಸದರಿಯವರ ವೇತನವನ್ನು ರೂ.40,000/–ಗಳಿಗೆ ಹೆಚ್ಚಿಸಲು ಮಂಡಳಿಯ ವಿಷಯವನ್ನು ಅನುಮೋದನೆಗೆ ಮಂಡಿಸಲಾಗಿದೆ. | ಶ್ರೀ.ಕೆ.ಆರ್.ಪ್ರಸನ್ನ,ತಾಂತ್ರಿಕ ಕಾರ್ಯನಿರ್ವಾಹಕರು (ಪಿಬಿಆರ್) ರವರ ವೇತನ ಹೆಚ್ಚಳಕ್ಕೆ ಮಂಡಿಸಿದ ಪ್ರಸ್ತಾವನೆಯನ್ನು ಸಭೆಯು ಅಂಗೀಕರಿಸಿತು. |

| | |
|---|---|
| **47/19–: ಎಬಿಎಸ್ ಸಮಾಲೋಚಕರು ಹಾಗೂ ಪಿಬಿಆರ್ ಸಮಾಲೋಚಕರು ಹುದ್ದೆಯ ಮಂಜೂರಾತಿ ಬಗ್ಗೆ**.<br>ಎಬಿಎಸ್ ಸಮಾಲೋಚಕರು ಹಾಗೂ ಪಿಬಿಆರ್ ಸಮಾಲೋಚಕರು 31/08/2021 ಹಾಗೂ 31/12/2021ರಂದು ಮುಕ್ತಾಯಗೊಳ್ಳಲಿದ್ದು ಸದರಿ ಹುದ್ದೆಗಳನ್ನು ಮತ್ತೆ ಮೂರು ವರ್ಷಗಳ ಅವಧಿಗೆ ಮುಂದುವರೆಸಲು ಮಂಡಳಿಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ. | ಎಬಿಎಸ್ ಹಾಗೂ ಪಿಬಿಆರ್ ಸಮಾಲೋಚಕರ ಹುದ್ದೆಗಳನ್ನು ಮೂರು ವರ್ಷಗಳ ಅವಧಿಗೆ ಮುಂದುವರೆಸಲು ಸಭೆಯು ಅಂಗೀಕರಿಸಿ, ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಲಾಯಿತು. |
| **47/20– ಕರ್ನಾಟಕ ಜೀವವೈವಿಧ್ಯ ಮಂಡಳಿಯ 2021-22ನೇ ಹಣಕಾಸಿನ ವರ್ಷದ ಬಜೆಟ್ ಅಂದಾಜು ವಿವರ**:<br>ಕರ್ನಾಟಕ ಜೀವವೈವಿಧ್ಯ ಮಂಡಳಿಯ 2021-22ನೇ ಹಣಕಾಸಿನ ವರ್ಷದ ಬಜೆಟ್ ಅಂದಾಜು ವಿವರವನ್ನು ತಯಾರಿಸಿದ್ದು ಈ ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ (ಅನುಬಂಧ-10) | ಕರ್ನಾಟಕ ಜೀವವೈವಿಧ್ಯ ಮಂಡಳಿಯ 2021-22 ನೇ ಹಣಕಾಸಿನ ವರ್ಷದ ಬಜೆಟ್ ಅನ್ನು ಮಂಡಳಿಯ ಸಭೆಯು ಅಂಗೀಕರಿಸಲಾಯಿತು. |
| **47/21–** ಕರ್ನಾಟಕ ರಾಜ್ಯ ಜೀವವೈವಿಧ್ಯ ಮಂಡಳಿಯ ಬೆಂಗಳೂರು ಕಛೇರಿಯಲ್ಲಿನ ತೋಟಗಾರಿಕೆ ಉಪ ನಿರ್ದೇಶಕರ ಹುದ್ದೆಯನ್ನು **"ಎನ್ ಕೇಡರ್"** ಹುದ್ದೆಯನ್ನಾಗಿ ಪರಿವರ್ತಿಸುವ ಕುರಿತು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | ಕರ್ನಾಟಕ ರಾಜ್ಯ ಜೀವವೈವಿಧ್ಯ ಮಂಡಳಿಯ ಬೆಂಗಳೂರು ಕಛೇರಿಯಲ್ಲಿನ ತೋಟಗಾರಿಕೆ ಉಪ ನಿರ್ದೇಶಕರ ಹುದ್ದೆಯನ್ನು **"ಎನ್ ಕೇಡರ್"** ಹುದ್ದೆಯನ್ನಾಗಿ ಪರಿವರ್ತಿಸುವ ಕುರಿತು ಮಂಡಳಿಯಿಂದ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ತೀರ್ಮಾನಿಸಿತು. |

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಕಾರ್ಯಚಟುವಟಿಕೆಗಳು ಇನ್ನಷ್ಟು ವೇಗಪಡೆದುಕೊಳ್ಳಲು ಸರ್ಕಾರದಲ್ಲಿ ಇರುವ ಕೆಲವೊಂದು ಕಡತಗಳ ಕುರಿತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆರವರಿಗೆ ಮಂಡಳಿಯ ಅಧ್ಯಕ್ಷರು ವಿನಂತಿಸಿದರು ಹಾಗೂ ಸದಸ್ಯ ಕಾರ್ಯದರ್ಶಿಗಳು ಸಭೆಯನ್ನು ಧನ್ಯವಾದಗಳೊಂದಿಗೆ ಮುಕ್ತಾಯಗೊಳಿಸಿದರು.